# ತಿಲ್ಲಾನ

ಸಂಗೀತನೃತ್ಯ ನಾಟಕವಾಹಿನಿ ಮಾಸಿಕ

ಸಂಪಾದಕ: ವಿ. ನಂಜುಂಡ ಸ್ವಾಮಿ

ಸಂಪುಟ ೧ ಸೆಪ್ಟೆಂಬರ್ ೧೯೮೩ ಸಂಚಿಕೆ ೧

## ಶುಭ ಸಂದೇಶ

ಪೂಜ್ಯ ಜಗದ್ಗುರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು "........ಮಹಾನ್ ಸಂಗೀತಗಾರರಾದ ವೀಣೆ ಶೇಷಣ್ಣನವರ ಸ್ಮಾರಕ ಭವನವನ್ನು ಅರ್ಪಿಸಿದ ಗಾನಭಾರತೀ ಸಂಸ್ಥೆ ಈಗ ತಿಲ್ಲಾನ ಮಾಸಪತ್ರಿಕೆಯನ್ನು ಪ್ರಾರಂಭಿಸಿ ಕಲಾಪ್ರಕಾರಗಳ, ಕಲಾವಿದರ ಪರಿಚಯ; ರಾಗ, ಕೃತಿ, ವಾಗ್ಗೇಯಕಾರರ ಕುರಿತ ಮಾಹಿತಿ; ಸಂಗೀತ ರಸಪ್ರಶ್ನೆ ಮುಂತಾದ ಸಂಗೀತ ಕಲೆಗೆ ಸಂಬಂಧಿಸಿದಂತೆ ಸರ್ವತೋಮುಖ ಪುರೋಭಿವೃದ್ಧಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದು ಮುದಾವಹದ ಸಂಗತಿ. ತಿಲ್ಲಾನ ಮಾಸಪತ್ರಿಕೆ ಸಂಗೀತರಸಿಕರ ಮನತಣಿಸಲಿ; ಕರ್ನಾಟಕ ಸಂಗೀತದ ಭವ್ಯಪರಂಪರೆ, ಹಿರಿಮೆಗರಿಮೆಗಳನ್ನು ಜನತೆಗೆ ಮನದಟ್ಟು ಮಾಡಿಕೊಡಲಿ ಎಂದು ನಾವು ಹೃತ್ಪೂರ್ವಕವಾಗಿ ಹಾರೈಸುತ್ತೇವೆ."

ಶ್ರೀಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಪೂಜ್ಯ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು "ಗಾನಭಾರತೀ ಸಂಸ್ಥೆಯ ಆಶ್ರಯದಲ್ಲಿ ತಿಲ್ಲಾನ ಎಂಬ ಮಾಸಪತ್ರಿಕೆಯನ್ನು ಪ್ರಕಟಿಸಲಿರುವ ವಿಚಾರ ತಿಳಿದು ಸಂತೋಷವಾಯಿತು. ಕಲಾಪ್ರಕಾರ ಹಾಗೂ ಕಲಾವಿದರ ಬಗ್ಗೆ ವಿಶೇಷ ಪರಿಚಯಾತ್ಮಕ ಲೇಖನಗಳಿಂದೊಡಗೂಡಿ ಪ್ರಕಟವಾಗಲಿರುವ ಈ ಪತ್ರಿಕೆ ಓದುಗರಿಗೆ ಒಂದು ಉತ್ತಮ ಮಾರ್ಗದರ್ಶಿಯಾಗುವುದರಲ್ಲಿ ಸಂದೇಹವಿಲ್ಲ. ನಿಮ್ಮ ಪ್ರಯತ್ನಕ್ಕೆ ಸರ್ವರೀತಿಯ ಯಶಸ್ಸನ್ನು ಹಾರೈಸುತ್ತೇನೆ. ಸಹೃದಯ ಓದುಗರಿಂದ, ಅಭಿಮಾನಿಗಳಿಂದ್ಲ ನಿಮ್ಮ ಮಾಸಪತ್ರಿಕೆಗೆ ಹೆಚ್ಚಿನ ಪ್ರೋತ್ಸಾಹ ದೊರೆತು ಪತ್ರಿಕಾಪ್ರಕಾಶನ ಕಾರ್ಯ ಸುಗಮವಾಗುವಂತೆ ಶ್ರೀ ಮಂಜುನಾಥ ಸ್ವಾಮಿ ಹರಸಲೆಂದು ಪ್ರಾರ್ಥಿಸುತ್ತೇನೆ."

TILLANA, a monthly bulletin of Ganabharathi (R), Veene Seshanna Bhavana, Adichunchanagiri Road, Kuvempunagar, Mysore 570 023

Phone 60662

# ಶುಭಾಶಂಸನೆ

ಗಾನಭಾರತೀ ಕಲಾಸಂಸ್ಥೆ ವೀಣೆ ಶೇಷಣ್ಣ ಭವನವನ್ನು ಉದ್ಘಾಟಿಸಿ ಎರಡು ವರ್ಷಗಳೂ ಸಂದಿಲ್ಲ. ಈ ಸಂಕ್ಷಿಪ್ತಾವಧಿಯಲ್ಲಿ ಇದು ವಿಪುಲ ಪ್ರಗತಿ ಸಾಧಿಸಿ ಕಲಾಭಿಮಾನಿಗಳ ಮೆಚ್ಚುಗೆ ಗಳಿಸಿದೆ. ೧೯೮೨ರಲ್ಲಿ ಆರಂಭಿಸಿದ ಸಂಗೀತನೃತ್ಯ ಶಾಲೆ ಈ ಸಂಸ್ಥೆಯ ಉಪಯುಕ್ತತೆಗೆ ಹೊಸ ಆಯಾಮ ನೀಡಿದೆ. ಈಗ ತೊಡಗಲಿರುವ ತಿಲ್ಲಾನ ಮಾಸಪತ್ರಿಕೆ ಸಂಸ್ಥೆಯ ಚಟುವಟಿಕೆಗಳ ಇನ್ನೊಂದು ಮುಖ.

ತಿಲ್ಲಾನವನ್ನು ಹೊರತರುವಲ್ಲಿ ಉತ್ಸಾಹದಿಂದ ಕಾರ್ಯಪ್ರವೃತ್ತರಾದ ನಮ್ಮ ಸಂಸ್ಥೆಯ ಎಲ್ಲ ಸ್ವಯಂಸೇವಾನಿರತ ಚೇತನಗಳಿಗೂ ಹಾರ್ದಿಕ ಅಭಿನಂದನೆ ಸಲ್ಲಿಸುತ್ತೇನೆ. ಮುಂಬರುವ ವರ್ಷಗಳಲ್ಲಿ ಈ ಮಾಸಪತ್ರಿಕೆ ಸರ್ವಾಂಗ ಸುಪುಷ್ಟವಾಗಿ ಅಭಿವರ್ಧಿಸಿ ಸಕಲಕಲಾವಾಣಿಯಾಗಿ ಅರಳಿ ಬೆಳಗಲೆಂದು ಹಾರೈಸುತ್ತೇನೆ.

ಜಿ. ಎಲ್. ಎನ್. ಅಯ್ಯ
ಅಧ್ಯಕ್ಷ ಗಾನಭಾರತೀ (ರಿ)

---

# ಸಂಪಾದಕೀಯ

ಗಾನಭಾರತೀ (ರಿ) ಸಂಸ್ಥೆಯ ಮುಖವಾಣಿಯಾಗಿ ತಿಲ್ಲಾನ ಹೆಸರಿನ ಮಾಸಪತ್ರಿಕೆಯನ್ನು ರಸಿಕ ವಾಚಕರಿಗೆ ಒಪ್ಪಿಸಲು ಹರ್ಷವಾಗುತ್ತದೆ. ಇದರ ಪ್ರವರ್ತನೆಗೆ ಪ್ರೇರಣೆ ಏನು ? ನಮ್ಮ ಸಂಸ್ಥೆ ಏರಿಬಂದ ಮಜಲುಗಳನ್ನು ಗಮನಿಸಿದರೆ ಅದೇನೆಂದು ತಿಳಿಯುತ್ತದೆ :

೧೯೬೮ ಫೆಬ್ರುವರಿ ೨ರಂದು ಈ ಸಂಸ್ಥೆಯನ್ನು ಪ್ರಾರಂಭಿಸಲಾಯಿತು. ಮುಖ್ಯವಾಗಿ ಸರಸ್ವತೀಪುರ–ಕುವೆಂಪುನಗರ–ಜಯನಗರ–ಕೃಷ್ಣಮೂರ್ತಿಪುರ ವಲಯದಲ್ಲಿಯ ಸಂಗೀತಪ್ರಿಯರಿಗೆ ಅವರ ಮನೆಯ ಮಿತಿಯಲ್ಲಿ ಮಾಸಿಕ ಸಂಗೀತ ಬೈಠಕ್ ಒದಗಿಸುವುದು, ಸ್ಥಳೀಯ ಪ್ರತಿಭೆಗಳ ಸರ್ವತೋಮುಖ ವಿಕಾಸಕ್ಕೆ ಯುಕ್ತ ಅವಕಾಶ ಕಲ್ಪಿಸುವುದು, ಮತ್ತು ಸಮಗ್ರವಾಗಿ, ಕಲಾವಿದ–ರಸಿಕ ಸಹಯೋಗದಿಂದ ಸಾಂಸ್ಕೃತಿಕ ಜಗತ್ತಿನಲ್ಲಿ ಹೊಸ ಹರವುಗಳನ್ನು ಅರಸುವುದು—ಇದು ಸಂಸ್ಥೆಯ ಖಚಿತ ಮತ್ತು ದೃಢ ಪಥಗಮನವನ್ನು ರೂಪಿಸಿದುವು.

ಸಂದ ಹದಿನೈದು ವರ್ಷಗಳಲ್ಲಿ ನಮ್ಮ ಸಂಸ್ಥೆ ನಡೆದುಬಂದ ಹಾದಿಯನ್ನು ಸಿಂಹಾವಲೋಕಿಸಿದರೆ ಎದ್ದು ಕಾಣುವ ಕೆಲವು ಹಂತಗಳಿವು :

* ಮಾಸಿಕ ಸಂಗೀತ ಕಚೇರಿಗಳ ಜೊತೆಗೆ ನೃತ್ಯ ಮತ್ತು ಸಂಗೀತ ರೂಪಕಗಳು. ಕರ್ನಾಟಕದ ಅಲ್ಲಿಯೂ ಮೈಸೂರಿನ ಕಲಾವಿದರಿಗೆ ಆದ್ಯತೆ.

* ಉದಯೋನ್ಮುಖ ಕಲಾವಿದರನ್ನು ಪ್ರೋತ್ಸಾಹಿಸಲು ತಲಾ ಒಂದೂ ಕಾಲು ಗಂಟೆಯ ಎರಡು ಕಾರ್ಯಕ್ರಮಗಳು.

* ವಾರ್ಷಿಕವಾಗಿ ಎರಡು ಸಂಗೀತೋತ್ಸವಗಳು : ಶ್ರೀ ಪುರಂದರ–ತ್ಯಾಗರಾಜ ಆರಾಧನೋತ್ಸವ, ಶ್ರೀ ಕೃಷ್ಣ ಜಯಂತಿ ಸಂಗೀತ ಸಮಾರಾಧನೆ.

* ಆರಾಧನೋತ್ಸವದ ಅಂಗವಾಗಿ ತರುಣ ಭಾರತೀ ಸಂಗೀತ ಕಾರ್ಯಕ್ರಮಗಳು—ಯುವ ಪ್ರತಿಭೆಗಳಿಗೆ ಸ್ಪರ್ಧೆ, ವೇದಿಕೆ ಇತ್ಯಾದಿ.

* ಸಂಗೀತ ಸಮಾರಾಧನೆಯ ಅಂಗವಾಗಿ ರಾಜ್ಯದ ಹಿರಿಯ ಕಲಾವಿದರಿಗೆ ಸನ್ಮಾನ.

* ಸಂಗೀತ ನೃತ್ಯ ಸ್ಪರ್ಧೆ ನಡೆಸಲು ನಗರದ ಸೇವಾಸಂಸ್ಥೆಗಳಿಗೆ ಸಹಕಾರ.

* ಗ್ರಂಥ ಪ್ರಕಟಣೆ, ಸವಿಸಂಚಿಕೆ ಮುದ್ರಣ.

* ಪ್ರಾಯೋಜಿತ ಕಾರ್ಯಕ್ರಮಗಳ ಏರ್ಪಾಡು, ನಗರದ ಇತರ ಕಲಾಸಂಸ್ಥೆಗಳ ಜೊತೆ ಸಹಯೋಗ.

* ಸರ್ಕಾರದ ನಿಬಂಧನೆಗಳಿಗೆ ಅನುಗುಣವಾಗಿ ವಾರ್ಷಿಕ ಸರ್ವಸದಸ್ಯರ ಮಹಾಸಭೆ ಮತ್ತು ಮೂರು ವರ್ಷಗಳಿಗೊಮ್ಮೆ ಕಾರ್ಯಕಾರಿ ಮಂಡಳಿಯ ಚುನಾವಣೆ. ಇದೊಂದು ಕ್ರಿಯಾಶೀಲಪ್ರಜಾಪ್ರಭುತ್ವಾತ್ಮಕ ಧರ್ಮನಿರಪೇಕ್ಷ ಸಾರ್ವಜನಿಕ ನೋಂದಾಯಿತ ಸಂಸ್ಥೆ, ಸದಸ್ಯರಿಂದ ರಸಿಕರಿಗಾಗಿ ಸದಸ್ಯರೇ ನಡೆಸುತ್ತಿರುವ ಜೀವಂತ ವ್ಯವಸ್ಥೆ.

* ಸ್ವಂತ ಭವನ ನಿರ್ಮಾಣಾರ್ಥ ನಿವೇಶನ ಖರೀದಿ ೧೯೮೮

* ವೀಣೆ ಶೇಷಣ್ಣ ಭವನದ ಶಂಕುಸ್ಥಾಪನೆ ಏಪ್ರಿಲ್ ೧೯೮೯

* ಭವನ ನಿರ್ಮಾಣ ಕಾರ್ಯಾರಂಭ ಜುಲೈ ೧೯೯೦. ಭವನದ ಉದ್ಘಾಟನೆ ೨೬-೧೨-೧೯೯೧. ಅಂದಾಜು ವೆಚ್ಚ ರೂ ೯ ಲಕ್ಷ. ಈ ಮಹಾಯಜ್ಞಕ್ಕೆ ಭಾರತ ಸರ್ಕಾರದಿಂದ ರೂ ೨ ಲಕ್ಷ ಮತ್ತು ಕರ್ನಾಟಕ ಸರ್ಕಾರದಿಂದ ರೂ ೧ ಲಕ್ಷ ಸಹಾಯಧನ ಒದಗಿವೆ. ಉಳಿದ ಹಣ ಸಾರ್ವಜನಿಕ ದಾನಿಗಳಿಂದ ಮತ್ತು ಜಾಹೀರಾತುಗಳಿಂದ ಸಂಗ್ರಹವಾಗಿದೆ, ಸಂಗ್ರಹವಾಗುತ್ತಿದೆ.

* ೨೬-೧೨-೧೯೯೧ರಿಂದ ಈಚೆಗೆ ಸಂಸ್ಥೆಯ ಸಕಲ ಕಾರ್ಯಕಲಾಪಗಳೂ ವೀಣೆ ಶೇಷಣ್ಣ ಭವನದಲ್ಲಿ ಜರಗುತ್ತಿದ್ದು ಇದು ನಗರದ ಒಂದು ಸಾಂಸ್ಕೃತಿಕ ಕೇಂದ್ರವಾಗಿ ಅರಳುತ್ತಿದೆ.

* ಗಾನಭಾರತೀ ಸಂಗೀತ ನೃತ್ಯ ಶಾಲೆಯ ಉದ್ಘಾಟನೆ ೧೨-೪-೧೯೯೨. ಗಾಯನ ನೃತ್ಯ ಪ್ರಥಮ ದ್ವಿತೀಯ ತರಗತಿಗಳು, ವೀಣೆ, ಕೊಳಲು, ಮೃದಂಗ, ಸ್ತೋತ್ರ ರೀತಿ ವಿಭಾಗಗಳಲ್ಲಿ ೨೦೦ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿರುವರು.

ಹೀಗೆ ಅಂದು (೧೯೭೮) ಕಿರು ಒರತೆಯಾಗಿ ಬುಳುಬುಳಿಸಲು ತೊಡಗಿದ ಈ ಸೇವಾ ಸಂಸ್ಥೆ ಇಂದು (೧೯೯೩) ಅಗಲ ತೊರೆಯಾಗಿ ತನ್ನ ಹಾದಿ ರೂಪಿಸುತ್ತ ಮುಂದೆ ಮುಂದೆ

ಹರಿಯುತ್ತಿದೆ. ಇದರ ಧ್ಯೇಯೋದ್ದೇಶಗಳನ್ನೂ ಕ್ರಿಯಾಕಲಾಪಗಳನ್ನೂ ಸರ್ವಸದಸ್ಯರಿಗೆ ಮತ್ತು ಇತರ ಸಹೃದಯರಿಗೆ ನಿಯತಕಾಲಿಕವಾಗಿ ತಿಳಿಯಪಡಿಸುವ ಉದ್ದೇಶದಿಂದ ಈ ಮಾಸಪತ್ರಿಕೆಯನ್ನು ಪ್ರಾರಂಭಿಸುತ್ತಿದ್ದೇವೆ

ತಿಲ್ಲಾನದ ವ್ಯಕ್ತಿತ್ವದ ಪ್ರಮುಖ ರೂಪರೇಷೆಗಳು

* ನಮ್ಮ ಸಂಸ್ಥೆಯ ಮಾಸಿಕ ಕಾರ್ಯಕಲಾಪಗಳ ಮುನ್ನೋಟ ಹಾಗೂ ನಗರದ ಇತರ ಕಲಾಸಂಸ್ಥೆಗಳ ಕಾರ್ಯಕ್ರಮಗಳ ಪಕ್ಷಿನೋಟ (ಸಂಚಿಕೆ ಅಚ್ಚಿಗೆ ಹೋಗುವ ವೇಳೆಗೆ ಲಭ್ಯವಿದ್ದಲ್ಲಿ ಹಾಗೂ ಸ್ಥಳಾವಕಾಶ ಇದ್ದಲ್ಲಿ ಮಾತ್ರ).

* ಕಲಾಪ್ರಕಾರಗಳನ್ನು ಮತ್ತು ಕಲಾವಿದರನ್ನು ಕುರಿತಂತೆ ಪರಿಚಯಾತ್ಮಕ ಲೇಖನಗಳು. ಸಂಗೀತ ನೃತ್ಯಗಳ ಬಗ್ಗೆ ರಸಪ್ರಶ್ನೆ, ರಾಗ, ಕೃತಿ ಮುಂತಾದವುಗಳ ಬಗ್ಗೆ ವಿವರಣೆ,

* ವಾಚಕರಿಂದ ಬರುವ ಸಲಹೆ ಸೂಚನೆಗಳನ್ನು ಗಮನಿಸಿ ಉಪಯುಕ್ತ ಅಂಕಣಗಳು.

ಪತ್ರಿಕೆ ಈಗ ನಿಮ್ಮ ಕೈ ಸೇರಿದೆ. ಪ್ರತಿಕ್ರಿಯೆಗಳಿಗೆ ಹಾರ್ದಿಕ ಸ್ವಾಗತ ಉಂಟು.

---

# ತಿಲ್ಲಾನ

ತಿಲ್ಲಾನ ಎಂದರೇನು ?

ಹದಿನೆಂಟನೆಯ ಶತಮಾನದಲ್ಲಿ ತಂಜಾವೂರಿನ ರಾಜನಾಗಿದ್ದ ಪ್ರತಾಪಸಿಂಹನ ಆಸ್ಥಾನದಲ್ಲಿದ್ದವರೆಂದು ಹೇಳಲಾದ ವೀರಭದ್ರಯ್ಯ ಎಂಬ ಸಂಗೀತ ವಿದ್ವಾಂಸರು ಉತ್ತರಾದಿ ಸಂಗೀತದಿಂದ ಪ್ರಭಾವಿತರಾಗಿ ಹಿಂದೂಸ್ತಾನಿ ಪದ್ಧತಿಯ 'ತರಾನ' ಎಂಬ ಸಂಗೀತ ಪ್ರಕಾರವನ್ನು ಅನುಕರಿಸಿ ತಿಲ್ಲಾನವನ್ನು ಮೊತ್ತಮೊದಲು ರಚಿಸಿದರೆಂಬುದಾಗಿ ತಿಳಿದುಬಂದಿದೆ. ಇದು ದೇಶ್ಯ ಸಂಗೀತದ 'ದಿರಿ ತಿಲ್ಲಾಣ'ದ ಮತ್ತೊಂದು ರೂಪವೆಂಬುದಾಗಿ ಕೆಲವು ವಿದ್ವಾಂಸರ ಅಭಿಪ್ರಾಯ. ತಕಿಟಾದಿ ಮೃದಂಗ ಜತಿಗಳನ್ನು ಸಾಹಿತ್ಯದಲ್ಲಿ ಹೊಂದಿಸಿರುವುದೇ ತಿಲ್ಲಾನದ ವೈಶಿಷ್ಟ್ಯ. ತಿಲ್ಲಾನವು ನೃತ್ಯಸಂಗೀತ ವಿಭಾಗಕ್ಕೆ ಸೇರಿದ ಸಂಗೀತರಚನೆ. ತಿಲ್ಲಾನದಲ್ಲಿ ಜತಿ, ಸ್ವರ ಮತ್ತು ಸಾಹಿತ್ಯ ಮೂರನ್ನೂ ಕಾಣಬಹುದು. ಪಲ್ಲವಿ ಮತ್ತು ಅನುಪಲ್ಲವಿಗಳಲ್ಲಿ ಮೃದಂಗದ ಜತಿಗಳು ಹೊಂದಿಕೊಂಡಿದ್ದು, ಚರಣದ ಸಾಹಿತ್ಯಾಕ್ಷರಗಳ ಜೊತೆಗೆ ಸೊಲ್ಕಟ್ಟುಸ್ವರ ಮತ್ತು ಸ್ವರಾಕ್ಷರ ಸಾಹಿತ್ಯಗಳಿರುತ್ತವೆ. ಪಲ್ಲವಿಯಲ್ಲಿ ಸಾಹಿತ್ಯಾಕ್ಷರದಿಂದ ಕೂಡಿದ ಮೃದಂಗ ಜತಿಗಳು ಮಧ್ಯಮಕಾಲದಲ್ಲಿ ಹೆಣೆಯಲ್ಪಟ್ಟಿರುತ್ತವೆ. ಇದಕ್ಕೆ ಸಂಗತಿಗಳು ಕೂಡ ಇವೆ. ಪ್ರತಿಯೊಂದು ಭಾಗವೂ ಬೇರೆಬೇರೆ ಧಾತುವನ್ನು ಹೊಂದಿರುತ್ತದೆ. ಅನುಪಲ್ಲವಿಯು ಸಾಧಾರಣವಾಗಿ ದ್ರುತ ಕಾಲದಲ್ಲಿದ್ದು ಚರಣವು ಮಧ್ಯಮಕಾಲದಲ್ಲಿರುತ್ತದೆ. ಚರಣವು ಸಾಹಿತ್ಯ ಚಿಟ್ಟೆಸ್ವರ ಮತ್ತು ಜತಿಯಿಂದ ಕೂಡಿರುತ್ತದೆ. ಚರಣದ ಸಾಹಿತ್ಯವು ಶೃಂಗಾರರಸಪ್ರಧಾನವಾಗಿದ್ದು ರಚನಕಾರನ ಇಷ್ಟದೇವತೆಯ ಅಥವಾ ಆಶ್ರಯದಾತನ ಸ್ತೋತ್ರರೂಪದ ಸಾಹಿತ್ಯವನ್ನೂ ಕೃತಿಕಾರನ ಮುದ್ರೆಯನ್ನೂ ಹೊಂದಿರಬಹುದು. ಮುದ್ರೆ ಇಲ್ಲದೆಯೂ

ಇರಬಹುದು. ಸಂಗೀತ ಕಚೇರಿಗಳಲ್ಲಿ ಸಾಮಾನ್ಯವಾಗಿ ಕೊನೆಯಲ್ಲಿ ತಿಲ್ಲಾನವನ್ನು ಹಾಡುವುದು ಸಂಪ್ರದಾಯ. ಹಾಗೆಯೇ ಭರತನಾಟ್ಯದ ಕಾರ್ಯಕ್ರಮಗಳ ಕೊನೆಯಲ್ಲಿ ತಿಲ್ಲಾನಕ್ಕೆ ಅಭಿನಯ ನೀಡಿ ರಂಜಿಸುತ್ತಾರೆ.

ಮಹಾವೈದ್ಯನಾಥ ಅಯ್ಯರ್ ರಚಿಸಿರುವ 'ಸಿಂಹನಂದನ' ತಾಳದ 'ಗೌರೀನಾಯಕ' ಎಂಬ ಕಾನಡ ರಾಗದ ತಿಲ್ಲಾನವು ಅತ್ಯಂತ ಪ್ರೌಢರೀತಿಯ ರಚನೆ. ಇದಲ್ಲದೆ ಪಲ್ಲವಿ ಶೇಷಯ್ಯರ್ ರಚಿಸಿರುವ ವಸಂತರಾಗದ 'ದ್ಝುಂ ದ್ಝುಂ ತರಿಕದ್ಝಾಂ' ಎಂಬ ಪ್ರಸಿದ್ಧ ತಿಲ್ಲಾನದಲ್ಲಿ ಸುಂದರವಾದ ಸಂಗತಿಗಳಿವೆ. ವೀಣೆ ಶೇಷಣ್ಣನವರ ಜಂಜೋಟಿ ಹಾಗೂ ದರ್ಬಾರಿಕಾನಡ ರಾಗದ ತಿಲ್ಲಾನಗಳು ಅತ್ಯಂತ ಪ್ರಸಿದ್ಧವಾಗಿವೆ. ಶೇಷಣ್ಣನವರ ತಿಲ್ಲಾನಗಳಲ್ಲಿ ಅವರ ರಚನಾ ಪ್ರತಿಭೆ ಜಾಜ್ವಲ್ಯಮಾನವಾಗಿ ಮೂಡಿದೆ. ಅವರಿಗೇ ಮೀಸಲಾದ ಒಂದು ವಿಶಿಷ್ಟ ಮನೋಧರ್ಮವನ್ನು ಅವರ ತಿಲ್ಲಾನಗಳಲ್ಲಿ ಕಾಣಬಹುದು. ಉದಾಹರಣೆಗೆ, ತೋಡಿ ರಾಗದ ತಿಲ್ಲಾನದಲ್ಲಿ ರಾಗವನ್ನು ಹಂತಹಂತವಾಗಿ ಬೆಳೆಸಿ ಅದಕ್ಕೆ ಪೂರ್ಣತ್ವ ನೀಡುವುದನ್ನು ಗಮನಿಸಬಹುದು. ಕೇದಾರ ರಾಗದ ತಿಲ್ಲಾನದಲ್ಲಿ ಗತ್ತಿನಿಂದ ಕೂಡಿದ ಸಂಗತಿಗಳು ರೋಚಕವಾಗಿವೆ. ತಿಲ್ಲಾನಗಳು ದ್ರುತಗತಿಯಲ್ಲಿದ್ದರೇ ಚೆನ್ನ ಎಂಬ ಪ್ರತೀತಿಗೆ ಅಪವಾದವಾಗಿ ಶೇಷಣ್ಣನವರ ಬಹುತೇಕ ತಿಲ್ಲಾನಗಳು ವಿಳಂಬ ಕಾಲದಲ್ಲೇ ಆರಂಭವಾಗುತ್ತವೆ. ವಿಳಂಬಕಾಲದಲ್ಲಿ ರಾಗವು ಮೊಗ್ಗು ಅರಳಿದ ಹಾಗೆ ಅರಳುವುದನ್ನು ನೋಡಿ ಆನಂದಿಸಬಹುದು. ರಂಜನೆಗಂತೂ ಕೊರತೆಯೇ ಇಲ್ಲ.

ವಿ. ನಂಜುಂಡ ಸ್ವಾಮಿ

---

**ವೀಣೆ ಶೇಷಣ್ಣ ಭವನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು**

೮-೧೦-೧೯೯೩ ಶುಕ್ರವಾರ ಸಂಜೆ ೬ ಗಂಟೆ (೨೭/೯೩)

ಶ್ರೀ ಟಿ. ಆರ್. ಸುಬ್ರಹ್ಮಣ್ಯಮ್ ... ಗಾಯನ
ಶ್ರೀ ಎಚ್. ಕೆ. ನರಸಿಂಹಮೂರ್ತಿ ... ಪಿಟೀಲು
ಶ್ರೀ ಜಿ. ಎಸ್. ರಾಮಾನುಜನ್ ... ಮೃದಂಗ

ಪ್ರಾಯೋಜಕರು : ಶ್ರೀಮತಿ ವಿ. ಲೀಲಾವತಿ ತಮ್ಮ ತಂದೆ
ಶ್ರೀ ವೀಣಾ ವೆಂಕಟೇಶ ಅಯ್ಯಂಗಾರ್ಯರ ಸ್ಮರಣಾರ್ಥ

---

೯-೧೦-೧೯೯೩ ಶನಿವಾರ ಸಂಜೆ ೬ ಗಂಟೆ (೨೮/೯೩)

ಶ್ರೀಮತಿ ರಾಧಾ ವೆಂಕಟಾಚಲಮ್ ... ಗಾಯನ

ಯುಕ್ತ ಪಕ್ಕವಾದ್ಯಸಹಿತ

ಪ್ರಾಯೋಜಕರು : ಸುನಾದ ಕಲ್ಚರಲ್ ಸೆಂಟರ್ ಮೈಸೂರು

೨೬-೧೦-೧೯೯೩ ಮಂಗಳವಾರ ಸಂಜೆ ೬ ಗಂಟೆ (೨೮/೯೩)

ವೀಣೆ ಶೇಷಣ್ಣ ಭವನ ಉದ್ಘಾಟನೆಯ (೨೬-೧೦-೧೯೯೧) ಸವಿನೆನಪಿಗೆ

ವೀಣಾನಾದವಿಹಾರ

ಶ್ರೀ ಕೆ. ವೆಂಕಟರಾಮನ್ ... ವೀಣೆ

ಶ್ರೀ ಎಸ್. ಸುದರ್ಶನ ... ಮೃದಂಗ

ಪ್ರಾಯೋಜಕರು : ಕಾರ್ಪೊರೇಶನ್ ಬ್ಯಾಂಕ್ ಪ್ರಧಾನ ಕಚೇರಿ ಮಂಗಳೂರು

'ನಿರಂತರ ಅಭಿವೃದ್ಧಿಶೀಲ ಬ್ಯಾಂಕ್'

---

## ಶ್ರೀ ಟಿ. ಆರ್. ಸುಬ್ರಹ್ಮಣ್ಯಮ್

ವ್ಯಕ್ತಿಯ ಬದುಕಿನಲ್ಲಿ ಸಂಗೀತದ ಪಾತ್ರವೇನು? ದೇಹಕ್ಕೆ ಜೀವಸತ್ತ್ವ (ವೈಟಮಿನ್) ಹೇಗೋ ಮನಸ್ಸಿಗೆ ಸಂಗೀತ ಹಾಗೆ. ಸಾಂದ್ರ ಸಂಗೀತ ಜೀವಸತ್ತ್ವವನ್ನು ನೀವು ಸೇವಿಸಿ ಆನಂದಭರಿತರಾಗಲು ಬಯಸುವಿರೇ? ಕೇಳಿ ಈ ಮಹಾಗಾಯಕನ ಗಾನಬ್ರಹ್ಮಪುತ್ರಪ್ರವಾಹವನ್ನು! ಶ್ರೀ ಮುಸಿರಿ ಸುಬ್ರಹ್ಮಣ್ಯ ಅಯ್ಯರರ ಅಗ್ರಮಾನ್ಯ ಶಿಷ್ಯ, ಬಹುಶ್ರುತ ವಿದ್ವಾಂಸ. ಉಲ್ಲಾಸದ ಸಾಕಾರ ಮೂರ್ತಿ. ಇಂಗ್ಲಿಷ್ ಎಂ.ಎ. ಪದವೀಧರ. ದೆಹಲಿ ವಿಶ್ವವಿದ್ಯಾಲಯದಲ್ಲಿ ಕರ್ನಾಟಕ ಸಂಗೀತ ಪ್ರಾಧ್ಯಾಪಕ.

---

## ಶ್ರೀಮತಿ ರಾಧಾ ವೆಂಕಟಾಚಲಮ್

ಶ್ರೀ ಟಿ. ಆರ್. ಸುಬ್ರಹ್ಮಣ್ಯಮ್ ಅವರ ಸಂಗೀತ-ಸಂಶೋಧನ ಶಿಷ್ಯೆ. ವೃತ್ತಿ ಗಾಯಿಕಿಯಾಗಿ ಗುರುವಿಗೆ ಸಮಗಾತ್ರದ ಕಲಾವಿದೆ. ಸಂಗೀತಶಾಸ್ತ್ರ ಸಂಶೋಧಕಿಯಾಗಿ ದೆಹಲಿ ವಿಶ್ವವಿದ್ಯಾಲಯದ ಡಾಕ್ಟೊರೇಟ್ ಪದವೀಧರೆ.

---

## ಶ್ರೀ ಕೆ. ವೆಂಕಟರಾಮನ್

ವೀಣೆಯಲ್ಲಿ ಮೈಸೂರುವಾಣಿ, ಆಂಧ್ರವಾಣಿ, ತಮಿಳುವಾಣಿ, ಕೇರಳವಾಣಿ ಮುಂತಾಗಿ ವಿವಿಧ ಶೈಲಿಗಳನ್ನು ಗುರುತಿಸಬಹುದು. ಘನಮಧುರ ಕೇರಳವಾಣಿಯ ಒಬ್ಬ ಹಿರಿಯ ಮುಖವಾಣಿ ವೆಂಕಟರಾಮನ್. (ಲಾಲ್ಗುಡಿ-ರಮಣಿ-ವೆಂಕಟರಾಮನ್ ಖ್ಯಾತಿಯ ಕಲಾವಿದ.) ತಿರುವನಂತಪುರ ಆಕಾಶವಾಣಿಯಲ್ಲಿ ಸೇವೆ.

---

Cultural Feast at Veene Seshanna Bhavana

8-10-1993 Friday at 6 pm (27/93)

Sri T. R. Subrahmanyam ... vocal

Sri H. K. Narasimhamurthy ... violin

Sri G. S. Ramanujan ... mridanga

Sponsored by Smt V. Leelavati in memory of her father Sri Veena Venkatesha Iyengar

9-10-1993 Saturday (28/93)

Dr Ms Radha Venkatachalam ... vocal

Sponsored by Sunada Cultural Centre

---

26-10-1993 Tuesday (29/93)

Veene Seshanna Bhavana inauguration day (26-10-1991)

Veena concert

Sri K. Venkataraman ... veena

Sri S. Sudarshan ... mridanga

Sponsored by Corporation Bank HO Mangalore

*A viable growing Bank*

---

*In the anvil*

5-11-1993 : Veena duet by Tanjore K. P. Sivanandam and Sarada Sivanandam

27-11-1993 : TVS—Nagaraj – PGL

---

## APPEAL FOR FUNDS

Respected Philanthropists !

We came to you in 1989-90 virtually emptyhanded but with a great cause to execute, an immense faith in your generosity. and a robust optimism in our potential to link the two to achieve the goal. You helped us. "Ages pass, and still thou pourest, and still there is room to fill."

The cause was to build Veene Seshanna Bhavana. This we did in less than eighteen months. The Bhavana was inaugurated on 26-10-1991. It is now yet another beauty spot and cultural centre in the City.

The work, the first phase of building Veene Seshanna Bhavana complex, has cost us about Rs 9 lakhs. Now we have launched the second phase in which we hope to complete the following works : acoustic treatment, gardening, stage equipment, building cottages and compound wall, etc.

We are sure of receiving your bounteous help as in the past, and achieving the second miracle : when people rise to encourage a great cause miracles do occur !

*Donations.* Any amount in any currency is welcome. Names of the donors paying Rs 1000 or more will be displayed on a plaque in the Bhavana.

*Sponsored concerts.* Deposit with us Rs 5000 or multiples thereof for sponsoring concerts annually in your name, or any other name you suggest.

*Underwriting the cost of items.* Bear the full cost or part thereof of items being taken up in the second phase as detailed above. You are welcome to donate the amount in the name of any one dear to you. Further details will be provided on demand.

Cheque/DD are to be written in favour Ganabharathi (R) Mysore and sent to us.

Donations to Ganabharathi (R) are exempted from Income Tax under Section 80 G of the IT Act.

---

ಕಲೆಗಳಲಿ ಪರಮಕಲೆ ಜೀವನದ ಲಲಿತಕಲೆ
ಕಲಿಸಲದನಳವಲ್ಲ ಬಾಹ್ಯಬೋಧನೆಯಿಂ
ಒಲಿದೊಲಿಸಿಕೊಳುವ ಲೌಕಿಕನಯದ ಸೊಗಸ ನೀಂ
ತಿಳಿವುದೊಳಹದದಿಂದ ಮಂಕುತಿಮ್ಮ

ಸಂಗೀತಕಲೆಯೊಂದು ಸಾಹಿತ್ಯ ಕಲೆಯೊಂದು
ಅಂಗಾಂಗ ಭಾವರೂಪಣದ ಕಲೆಯೊಂದು
ಸಂಗಳಿಸಲೀ ಕಲೆಗಳನುನಯವು ಚರ್ಚೆಯಲಿ
ಮಂಗಳೋನ್ನತ ಕಲೆಯೊ ಮಂಕುತಿಮ್ಮ

---

# CONTACT ADDRESSES

*President*

**G. L. N. AYYA**

96 Manaboom
Ninth main
Saraswatipura
MYSORE 570 009

Phone 31292

*Editorial matters*

**V. NANJUNDA SWAMY**

No 1704 'Shivashakthi'
P & T Block III Cross
North Anikethana Road
Kuvempunagar
MYSORE 570 023

Phone 60662

*Change of address of Life Members*

**U. SHRIDHARA BHAT**

'Jayavittal'
First Main
Saraswatipura
MYSORE 570 009

Phone 34808

*Sangeeta Nritya Sala*

**K. R. UDUPA**

M 5, Srikara
Ist Stage
Kuvempunagar
MYSORE 570 023

Phone 60263

*Hall, programme, enquiry*

**B.N.R. IYENGAR**

358 'Punarvasu'
Navilu main Road
Kuvempunagar
MYSORE 570 023

Phone 61409

*Financial matters*

**G. T. NARAYANA RAO**

8 Athree Kamakshi Hospital Road
Kuvempunagar
MYSORE 570 023

Phone 25759

---

Edited and published for Ganabharathi (R) by V. Nanjunda Swamy 1704 Shivashakthi P & T Block North Anikethana Road III Cross Kuvempunagar Mysore 570 023. Phone 60662

Printed at Harsha Printers Basaveswara Road Mysore 570 004 Phone 33176